ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ : ಬೆಂಗಳೂರು

16.04.2025ರಂದು ಇ-ಹರಾಜಿನ ಮೂಲಕ ಸ್ವತ್ತುಗಳ ಮಾರಾಟ

ಇಎಂಡಿ ಕೊನೆಯ ದಿನಾಂಕ : 15.04.2025

ಎಆರ್‌ಎಂ-1 ಶಾಖೆ, 2ನೇ ಮಹಡಿ, ನಂ.86, ಸ್ಟೆನ್ಸರ್ಸ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು-560001. ದೂ. ಸಂಖ್ಯೆ : 080-25310066 ಇ-ಮೇಲ್: cb2366@canarabank.com

ಇ-ಹರಾಜು ಮಾರಾಟ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಸಾಮಾನ್ಯವಾಗಿ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು) ಮತ್ತು ಜಾಮೀನುದಾರರಿಗೆ (ರು) ಸೂಚನೆಯನ್ನು ನೀಡಲಾಗಿದೆ, ಕೆಳಗೆ ವಿವರಿಸಿದ ಸ್ಥಿರಾಸ್ತಿಗಳನ್ನು ಸುರಕ್ಷಿತ ಸಾಲಗಾರನಿಗೆ ಅಡಮಾನ/ಚಾರ್ಜ್ ಮಾಡಲಾಗಿದೆ, ಅದರ ಭೌತಿಕ/ಸಾಂಕೇತಿಕ ಸ್ವಾಧೀನವನ್ನು ಅಧಿಕೃತ ಅಧಿಕಾರಿ ಕೆನರಾ ಬ್ಯಾಂಕ್, ಎಆರ್‌ಎಂ ಶಾಖೆ-1, ಬೆಂಗಳೂರು ಇವರು ತೆಗೆದುಕೊಂಡಿರುತ್ತಾರೆ. ಇ-ಹರಾಜನ್ನು "ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ" ಆಧಾರದಲ್ಲಿ ದಿನಾಂಕ: 16.04.2025 ರಂದು ಬೆಳಗ್ಗೆ 11.00 ರಿಂದ 11.30 ರವರೆಗೆ ಮಾರಾಟ ಮಾಡಲಾಗುವುದು. ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ನ್ನು ಓದಿಕೊಂಡಂತೆ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ.

ವಿವರಗಳಿಗಾಗಿ ಇ-ಹರಾಜು ಮತ್ತು ಡಿಜಿಟಲ್ ಸಹಿಯೊಂದಿಗೆ ನಮ್ಮ ಸೇವಾ ಪೂರೈಕೆದಾರರಾದ ಮೆ॥ ಪಿಎಸ್‌ಬಿ ಅಲಿಯನ್ಸ್ ಪ್ರೈವೇಟ್ ಲಿಮಿಟೆಡ್‌ನ್ನು ಸಂಪರ್ಕಿಸಿ, ಹೆಲ್ಪ್‌ಡೆಸ್ಕ್ ಸಂಖ್ಯೆ : 8291220220, ವೆಬ್‌ಸೈಟ್: https://baanknet.com/

ಮುಂಗಡ ಹಣ ಶೇವಣಿಯನ್ನು ಇ-ವ್ಯಾಲೇಟ್ ಮೂಲಕ ಮೆ॥ ಪಿಎಸ್‌ಬಿ ಅಲಿಯನ್ಸ್ ಪ್ರೈವೇಟ್ ಲಿಮಿಟೆಡ್ (https://baanknet.com/), ಪೋರ್ಟಲ್ ಮೂಲಕ ನೇರವಾಗಿ ಅಥವಾ ಚಲನ್ ತೆಗೆಸುವುದರ ಮೂಲಕ ಇಎಂಡಿಯನ್ನು RTGS/NEFT ಮೂಲಕ ಖಾತೆಯ ಚಲನ್‌ನಲ್ಲಿ ವಿವರಗಳನ್ನು ಇಲ್ಲಿ ನಮೂದಿಸಿದಂತೆ ದಿನಾಂಕ: 15.04.2025ರಂದು ಸಂಜೆ 5.00 ಗಂಟೆ ಒಳಗೆ ಶೇವಣಿ ಇಡಬೇಕು.

ರೂ.ಲಕ್ಷಗಳಲ್ಲಿ)

ಕ್ರ ಸಂ.	ಸಾಲಗಾರರು/ ಜಾಮೀನುದಾರರು/ಅಡಮಾನದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಗಳ ವಿವರಣೆ	ಒಟ್ಟು ಬಾಕಿ ಸ್ವಾಧೀನದ ವಿಧ	ಎ. ಮೀಸಲು ಬೆಲೆ ಬಿ. ಇಎಂಡಿ ಸಿ. ಬಿಡ್ ಹೆಚ್ಚಳ	ಪರಿಶೀಲನೆ ದಿನಾಂಕ ಮತ್ತು ಸಮಯ
1..	1. ಮೆ॥ ಲಕ್ಷ್ಮಿ ನಾರಾಯಣಸ್ವಾಮಿ ಎಂ ಎಸ್ 2. ಶ್ರೀ. ಲಕ್ಷ್ಮಣಪ್ಪ ಎಂ ಆರ್ ಬಿನ್ ರಾಮಯ್ಯ 3. ಶ್ರೀಮತಿ ಪಾರ್ವತಮ್ಮ ಕೋಂ, ಲಕ್ಷ್ಮಣಪ್ಪ ಎಂ ಆರ್ ನಂ.1,2,3 : ಡೋರ್ ನಂ.130/4, 80 ಅಡಿ ರಸ್ತೆ, ಕೆಎಚ್‌ಬಿ ಕಾಲೋನಿ, ಬಸವೇಶ್ವರ ನಗರ, ಬೆಂಗಳೂರು-560079. 2 ಮತ್ತು 3ರವರ ಮತ್ತೊಂದು ವಿಳಾಸ : ಶ್ರೀಮತಿ ಪಾರ್ವತಮ್ಮ, ವಾಸ: 138, ಶ್ರೀನಿಕೇತನ, 7ನೇ ಮೇನ್, ಹುರುಷರ ರೈಲ್ವೆ ಲೇಔಟ್, ಭವಾನಿ ನಗರ, ಉಲ್ಲಾಳ, ಬೆಂಗಳೂರು ದಕ್ಷಿಣ- 560056. ಇಲ್ಲಿಯೂ ಸಹ: ಶ್ರೀಮತಿ ಪಾರ್ವತಮ್ಮ #403, ವಿಶ್ವೇಶ್ವರಯ್ಯ ಲೇಔಟ್, 6ನೇ ಬ್ಲಾಕ್, ಕೆ ಎಲ್ ಇ ಕಾನೂನು ಕಾಲೇಜು ಹತ್ತಿರ, ಬೆಂಗಳೂರು-560091.	ಆಸ್ತಿತ್ವದಲ್ಲಿರುವ ನೊಂದಣಿ ಎಂಒಡಿಟಿಡಿ ಭೂಮಿಯ ಸರ್ವೆ ನಂ. 43/ಪಿ1, ಖಾತಾ ಸಂಖ್ಯೆ 167 ಮತ್ತು 168, ದನನಾಯಕನಹುರ ಗ್ರಾಮ, ಖ್ಯಾತ ಗ್ರಾಮ, ಊಡಿಗೆರೆ ಹೋಬಳಿ, ತುಮಕೂರು ಜಿಲ್ಲೆ-572104, 14 ಎಕರೆಯಲ್ಲಿ 9 ಎಕರೆಗಳನ್ನು ಒಳಗೊಂಡಿದೆ. ಶ್ರೀ ಲಕ್ಷ್ಮಣಪ್ಪ ಎಂ ಆರ್ ಬಿನ್ ರಾಮಯ್ಯ ಅವರ ಹೆಸರಿನಲ್ಲಿದೆ. ಹಾಗೂ ಶ್ರೀಮತಿ ಪಾರ್ವತಮ್ಮ ಕೋಂ. ಲಕ್ಷ್ಮಣಪ್ಪ ಎಂ ಆರ್ ಅವರ ಹೆಸರಿನಲ್ಲಿ 5 ಎಕರೆ ಇದೆ. ಒಟ್ಟು 14 ಎಕರೆಯಲ್ಲಿ ಕೇವಲ 4 ಎಕರೆ ಭೂಮಿ (ತಲಾ 2 ಎಕರೆಗೆ ಖಾತಾ ಸಂಖ್ಯೆ 167 ಮತ್ತು 168) ಅನ್ನು ಕೈಗಾರಿಕಾ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ. ಚಕ್ಕುಬಂಧಿ ಈ ಕೆಳಗಿನಂತಿದೆ : 1. ಬ್ಯಾತ ಗ್ರಾಮದ ಸರ್ವೆ ನಂ 43/ಪಿ1, 7 ಎಕರೆ-0 ಗುಂಟೆಗಳು : ಪೂರ್ವಕ್ಕೆ : ಸರ್ವೆ ನಂ.44, ಪಶ್ಚಿಮಕ್ಕೆ : ಸರ್ವೆ ನಂ.44, ಉತ್ತರಕ್ಕೆ : ಪಾರ್ವತಮ್ಮ ಅವರಿಗೆ ಸೇರಿದ ಭೂಮಿ, ದಕ್ಷಿಣಕ್ಕೆ : ವೀರಣ್ಣ ಅವರಿಗೆ ಸೇರಿದ ಭೂಮಿ. 2. ಬ್ಯಾತ ಗ್ರಾಮದ ಸರ್ವೆ ನಂ. 43/ಪಿ1, 7ಎಕರೆ-0 ಗುಂಟೆಗಳು : ಪೂರ್ವಕ್ಕೆ : ಲಕ್ಷ್ಮಣಪ್ಪ ಅವರಿಗೆ ಸೇರಿದ ಭೂಮಿ, ಪಶ್ಚಿಮಕ್ಕೆ : ವೀರಣ್ಣನವರಿಗೆ ಸೇರಿದ ಭೂಮಿ, ಉತ್ತರಕ್ಕೆ : ಸರ್ವೆ ನಂ.44, ದಕ್ಷಿಣಕ್ಕೆ :ಉಳಿದ ರಸ್ತೆ. 3. ಬ್ಯಾತ ಗ್ರಾಮದ ಸರ್ವೆ ನಂ. 43/ಪಿ1, 2ಎಕರೆ-0 ಗುಂಟೆಗಳು: ಪೂರ್ವಕ್ಕೆ : ಉಳಿದ ಭೂಮಿ, ಪಶ್ಚಿಮಕ್ಕೆ : ಸರ್ವೆ ನಂ. 46, ಉತ್ತರಕ್ಕೆ : ಸರ್ವೆ ನಂ.44, ದಕ್ಷಿಣಕ್ಕೆ : ಉಳಿದ ರಸ್ತೆ. 4. ಬ್ಯಾತ ಗ್ರಾಮದ ಸರ್ವೆ ನಂ. 43/ಪಿ1, 2ಎಕರೆ-0 ಗುಂಟೆಗಳು: ಪೂರ್ವಕ್ಕೆ : ಉಳಿದ ಭೂಮಿ, ಪಶ್ಚಿಮಕ್ಕೆ : ಸರ್ವೆ ನಂ. 46, ಉತ್ತರಕ್ಕೆ : ಸರ್ವೆ ನಂ.44, ದಕ್ಷಿಣಕ್ಕೆ : ಉಳಿದ ರಸ್ತೆ, ಆಸ್ತಿಯ ನಿರ್ದೇಶಾಂಕಗಳು ಅಂಕಾಂಶ -13.290047, ರೇಖಾಂಶ -77.222282	ರೂ. 15,73,79,335.54 ಮತ್ತಷ್ಟು ಬಡ್ಡಿ ಮತ್ತು ವೆಚ್ಚಗಳು ಸೇರುತ್ತವೆ.	ಎ. ರೂ. 583.17 ಬಿ. ರೂ. 58.32 ಸಿ. ರೂ. 1.00	09.04.2025 ಬೆಳಗ್ಗೆ 10.00 ರಿಂದ ಮಧ್ಯಾಹ್ನ 2.00 ಗಂಟೆಗೆ ಅಧಿಕೃತ ಅಧಿಕಾರಿಯವರಿಂದ ಪೂರ್ವನುಮತಿ ಪಡೆದುಕೊಂಡು

ಕ್ರ.ಸಂ.	ಯಂತ್ರಗಳ ವಿವರಣೆ	ಮೀಸಲು ಬೆಲೆ	ಇಎಂಡಿ	ಹೆಚ್ಚಿಸುವ ಮೌಲ್ಯ
1.	2 ಸ್ಟ್ರೀಮ್ಸ್‌ನ 300 ಟಿಪಿಹೆಚ್ ಸ್ಕಿಡ್ ಮೌಂಟೆಡ್ ಸ್ಕ್ರಾಂಡ್ ಕ್ರಶಿಂಗ್ ಪ್ಲ್ಯಾಂಟ್ ಜೊತೆಗೆ ಸ್ಟಾಕ್ ಪೈಲ್ 5000ಟಿ ಅಂಡ್ ಡ್ರೈ ಕ್ಲಾಸಿಫಿಕೇಷನ್ ಯೂನಿಟ್.	ರೂ. 797.50	ರೂ. 79.75	ರೂ. 1.00
2.	ವೋಲ್ವೊ ಹಿತಾಚಿ ಎಕ್ಸಾವೆಟರ್.	ರೂ. 311.85	ರೂ. 31.19	ರೂ. 1.00
3.	304 ಕೆಡಬ್ಲ್ಯೂ/380 ಕೆವಿಎ ಸೈಲೆಂಟ್ ಡೀಸೆಲ್ ಜನರೇಟಿಂಗ್ ಸೆಟ್ ಜೊತೆಗೆ ಸಿಪಿಸಿಬಿ 2ನೇ ಅನುಮೋದಿತ ಅಕೌಸ್ಟಿಕ್ ಎನ್‌ಕ್ಲೋಸರ್ ಅನ್ನು ಒಳಗೊಂಡಿರುತ್ತದೆ. ಕ್ಯೂಮಿನ್ಸ್ ಮಾಡೆಲ್ ಕ್ಯೂಎಸ್‌ಎನ್-14-ಜಿ, ರೇಡಿಯೇಟರ್ ಕೂಲ್ಡ್ ಡೀಸೆಲ್ ಎಂಜಿನ್ ಡಿಸಿಲೋಪಿಂಗ್ 487 ಬಿಹೆಚ್‌ಪಿ, 1500 ಆರ್‌ಪಿಎಂ ಜೊತೆಗೆ ಪಿಸಿಸಿ 3.3 ನಿಯಂತ್ರಕವು ಪ್ರಮಾಣಿತ ಪರಿಕರಗಳೊಂದಿಗೆ ಪೂರ್ಣಗೊಂಡಿದೆ. ಸ್ಟಾಮ್ ಫೋರ್ಡ್ ಆವರ್ತಕಕ್ಕೆ 304ಕೆಡಬ್ಲ್ಯೂ/380ಕೆವಿಎ ಅನ್ನು 415 ವೋಲ್ಟ್‌ಗಳಲ್ಲಿ ಜೋಡಿಸಲಾಗಿದೆ. ಮೌಂಟೆಡ್ ಚಾನಲ್ ಐರನ್ ಬೇಸ್ ಫ್ರೇಮ್‌ನಲ್ಲಿ ಅಳವಡಿಸಲಾಗಿದೆ, ಇಂಧನ ಟ್ಯಾಂಕ್ ಮತ್ತು ಸಂಪೂರ್ಣ ನಿರ್ವಹಣೆ ಉಚಿತ ಚಾರ್ಜ್‌ಡ್ ಕಮ್ಮಿನ್ಸ್ ಪಲ್ಸ್ ಲೈಟ್ ಬ್ಯಾಟರಿಗಳು ಪ್ಯಾನಲ್ ಇಲ್ಲದೆ ಜೋಡಿಸಲಾಗಿದೆ.	ರೂ. 21.45	ರೂ. 2.41	ರೂ. 1.00
4.	600ಕೆಡಬ್ಲ್ಯೂ/750ಕೆವಿಎ ಸೈಲೆಂಟ್ ಡೀಸೆಲ್ ಜನರೇಟಿಂಗ್ ಸೆಟ್ ಜೊತೆಗೆ ಸಿಪಿಸಿಬಿ 2ನೇ ಅನುಮೋದಿತ ಅಕೌಸ್ಟಿಕ್ ಎನ್‌ಕ್ಲೋಸರ್ ಅನ್ನು ಕ್ಯೂಮಿನ್ಸ್ ಮಾಡೆಲ್ ಕೆಟಿಎ-38-ಜಿ13, ರೇಡಿಯೇಟರ್ ಕೂಲ್ಡ್ ಡೀಸೆಲ್ ಎಂಜಿನ್ ಡಿಸಿಲೋಪಿಂಗ್ 987 ಬಿಹೆಚ್ ಪಿ, 1500 ಆರ್ ಪಿಎಂ ಒಳಗೊಂಡಿರುತ್ತದೆ. ಸಂಪೂರ್ಣವಾಗಿ ಸ್ಕ್ಯಾಂಡರ್ಡ್ ಬಿಡಿಭಾಗಗಳೊಂದಿಗೆ ಕೂಪಲ್ಸ್ ಸ್ಟಾಮ್‌ಫೋರ್ಡ್ ಆವರ್ತಕವನ್ನು ಜೋಡಿಸಲಾಗಿದೆ. 600ಕೆಡಬ್ಲ್ಯೂ/750ಕೆವಿಎ ಅನ್ನು 415 ವೋಲ್ಟ್‌ಗಳು, ಮೂರು ಹಂತಗಳಲ್ಲಿ ಅಳವಡಿಸಲಾಗಿದೆ, ಮೌಂಟೆಡ್ ಚಾನಲ್ ಐರನ್ ಬೇಸ್ ಫ್ರೇಮ್‌ನಲ್ಲಿ ಅಳವಡಿಸಲಾಗಿದೆ, ಇಂಧನ ಟ್ಯಾಂಕ್ 990 ಲೀಟರ್ ಸಾಮರ್ಥ್ಯ ಮತ್ತು ನಿರ್ವಹಣೆ ಉಚಿತ ಚಾರ್ಜ್‌ಡ್ ಕಮ್ಮಿನ್ಸ್ ಪಲ್ಸ್‌ಲೈಟ್ ಬ್ಯಾಟರಿಗಳು ಪ್ಯಾನಲ್ ಇಲ್ಲದೆ ಜೋಡಿಸಲಾಗಿದೆ.	ರೂ. 46.75	ರೂ. 4.68	ರೂ. 1.00
5.	1200ಕೆಡಬ್ಲ್ಯೂ/1500ಕೆವಿಎ ಸೈಲೆಂಟ್ ಡೀಸೆಲ್ ಜನರೇಟಿಂಗ್ ಸೆಟ್ ಜೊತೆಗೆ ಅಕೌಸ್ಟಿಕ್ ಎನ್‌ಕ್ಲೋಸರ್ ಅನ್ನು ಕ್ಯೂಮಿನ್ಸ್ ಮಾಡೆಲ್ ಕೆಟಿಎ-50-ಜಿ8-1, ರೇಡಿಯೇಟರ್ ಕೂಲ್ಡ್ ಡೀಸೆಲ್ ಎಂಜಿನ್ ಡಿಸಿಲೋಪಿಂಗ್ 1735 ಬಿಹೆಚ್ ಪಿ, 1500 ಆರ್‌ಪಿಎಂ ಒಳಗೊಂಡಿರುತ್ತದೆ. ಸಂಪೂರ್ಣವಾಗಿ ಸ್ಕ್ಯಾಂಡರ್ಡ್ ಬಿಡಿಭಾಗಗಳೊಂದಿಗೆ ಕೂಪಲ್ಸ್ ಸ್ಟ್ಯಾಮ್ ಫೋರ್ಡ್ ಆವರ್ತಕವನ್ನು ಜೋಡಿಸಲಾಗಿದೆ. 1200ಕೆಡಬ್ಲ್ಯೂ/1500ಕೆವಿಎ ಅನ್ನು 415 ವೋಲ್ಟ್‌ಗಳು, ಮೂರು ಹಂತಗಳಲ್ಲಿ ಅಳವಡಿಸಲಾಗಿದೆ, ಮೌಂಟೆಡ್ ಚಾನಲ್ ಐರನ್ ಬೇಸ್ ಫ್ರೇಮ್‌ನಲ್ಲಿ ಅಳವಡಿಸಲಾಗಿದೆ, ಇಂಧನ ಟ್ಯಾಂಕ್ 990 ಲೀಟರ್ ಸಾಮರ್ಥ್ಯ ಮತ್ತು ನಿರ್ವಹಣೆ ಉಚಿತ ಚಾರ್ಜ್‌ಡ್ ಕಮ್ಮಿನ್ಸ್ ಪಲ್ಸ್ ಲೈಟ್ ಬ್ಯಾಟರಿಗಳು ಪ್ಯಾನಲ್ ಇಲ್ಲದೆ ಜೋಡಿಸಲಾಗಿದೆ.	ರೂ. 94.00	ರೂ. 9.40	ರೂ. 1.00
6.	ಸಿಎಲ್‌ಎ 25.220 (6*4) (ಎಇ) ಸಂಪೂರ್ಣವಾಗಿ ಕಟ್ಟಿರುವ ಟಿಪ್ಪರ್ ಜೊತೆಗೆ 16 ಕಂ ಸ್ಕ್ಯಾಂಡರ್ ಬಾಕ್ಸ್ ಇಂಜಿನ್ 0836ಎಲ್‌ಎಫ್‌ಎಲ್ 220 ಹೆಚ್‌ಪಿ ಗೇರ್ ಬಾಕ್ಸ್ 95 1110, ರೇರ್ ಆಕ್ಸಲ್ ಎಪಿ-ಹೆಚ್ ಪಿ-13120 ಜೊತೆಗೆ ಇಂಟರಾಕ್ಸಲ್ ಮತ್ತು ಡಿಫ್ ಲಾಕ್, ರೇರ್ ಸಸ್ಪೆನ್ಸನ್ ಜೊಗಲ್, ರೂ.123.20 8.12.32 ವೀಲ್ ಬೇಸ್ 4525 ಟೈರ್ 11.008 20-16 ಪಿಲರ್ ಜೊತೆಗೆ ಇಟಿಟಿ ಫ್ರಂಟ್ ಸ್ಟೀಲ್ ಬಂಪರ್, ಡೇ ಕ್ಯಾಬಿನ್, ಎಬಿಎಸ್, ಬಿಎಸ್-111.	ರೂ. 123.20	ರೂ. 12.32	ರೂ. 1.00
7.	ಎಸ್ ಹೈಡ್ರಾಲಿಕ್ ಮೊಬೈಲ್ ಕ್ರೇನ್ ಮಾದರಿ ಎಸಿಇ ಎಫ್-160 4 ಭಾಗ ಸ್ಲಾಟೆಡ್ ಬೂಮ್ ಜೊತೆಗೆ 18.1 ಎಂಟಿಆರ್‌ಆರ್‌ಎಸ್ ಹೈಟ್ ಜೊತೆಗೆ ಎಸ್‌ಎಲ್‌ಐ, ರೇರ್ ವ್ಯೂ ಕ್ಯಾಮೆರಾ, 4 ವೀಲ್ ಡ್ರೈವ್ ಜೊತೆಗೆ ಫ್ರಂಟ್ ಔಟ್‌ರಿಗ್ಗರ್‌ಗಳು (2 ಸಂಖ್ಯೆ) ಫೈ ಜಿಬ್ ಮತ್ತು ಡ್ರಾಗ್‌ಗಿಂಗ್ ವಿಂಚ್, ಹೈಲೋ ಸೆಲೆಕ್ಟರ್ (16 ಟನ್ ಸಾಮರ್ಥ್ಯ, ಅಶೋಕ್ ಲೇಲ್ಯಾಂಡ್ ಎಂಜಿನ್).	ರೂ. 10.55	ರೂ. 1.06	ರೂ. 1.00
8.	ಸಿಎಲ್‌ಸಿ 31.30 (8*4) ಸಂಪೂರ್ಣ ನಿರ್ಮಿತ ಟಿಪ್ಪರ್ 18 ಕಮ್ ಬಾಕ್ಸ್ ಬಾಡಿ, ಭಾರತ್ ಸ್ಟೇಜ್-IV ಜೊತೆಗೆ 12 ವೀಲರ್.	ರೂ. 112.20	ರೂ. 11.22	ರೂ. 1.00
9.	ಸಿಎಲ್‌ಸಿ 31.30 (6*4) ಸಂಪೂರ್ಣ ನಿರ್ಮಿತ ಟಿಪ್ಪರ್ 16 ಕಮ್ ಬಾಕ್ಸ್ ಬಾಡಿ, ಭಾರತ್ ಸ್ಟೇಜ್-IV ಜೊತೆಗೆ 10 ವೀಲರ್.	ರೂ. 102.30	ರೂ. 10.24	ರೂ. 1.00
10.	ನ್ಯೂ ಟಯೋಟಾ ಲ್ಯಾಂಡ್ ಕ್ರಾಸರ್ 200 ಡಿಸೇಲ್ ಸೂಪರ್ ವೈಟ್.	ರೂ. 95.95	ರೂ. 9.30	ರೂ. 1.00
	ಒಟ್ಟು	ರೂ. 1715.75		

ಹೊರೆಗಳು ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು 'ಇ-ಹರಾಜು' ಲಿಂಕ್ ಪ್ರೊವೈಡೆಡ್ ಕೆನರಾ ಬ್ಯಾಂಕ್ ಅವರ ವೆಬ್‌ಸೈಟ್: (www.canarabank.com) ನಲ್ಲಿ ಒದಗಿಸಲಾಗಿದೆ ಅಥವಾ ಇ-ವ್ಯಾಲೇಟ್ ಮೂಲಕ ಮೆ॥ ಪಿಎಸ್‌ಬಿ ಅಲಿಯನ್ಸ್ ಪ್ರೈವೇಟ್ ಲಿಮಿಟೆಡ್ (https://baanknet.com/), ಪೋರ್ಟಲ್‌ನಲ್ಲಿ ಮತ್ತು ಸಂಪರ್ಕಿಸಿ ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು, ದೂರವಾಣಿ ಸಂಖ್ಯೆ: 08025310066, 9627872626,7483935007,9538406090 ಮತ್ತು 9598559920 ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸ್ಥಳ -: ಬೆಂಗಳೂರು
ದಿನಾಂಕ : 25.03.2025

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಏ.8ರಂದು ಜಿಲ್ಲಾ ಮಟ್ಟದ ದಿಶಾ ಸಮಿತಿ ಸಭೆ

ತುಮಕೂರು: ಕೇಂದ್ರದ ರೈಲ್ವೆ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವ, ಸಂಸದ ಹಾಗೂ ಜಿಲ್ಲಾ ದಿಶಾ ಸಮಿತಿ ಅಧ್ಯಕ್ಷ ವಿ. ಸೋಮಣ್ಣ ಅವರ ಅಧ್ಯಕ್ಷತೆಯಲ್ಲಿ ಏಪ್ರಿಲ್ 8ರ ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ದಿಶಾ ಸಮಿತಿ ಸಭೆ ನಡೆಯಲಿದೆ.

ಸಂಸದರು ಸಭೆಯಲ್ಲಿ 2024-25ನೇ ಸಾಲಿನ ಮಾರ್ಚ್-2025ರ ಅಂತ್ಯದವರೆಗೆ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಲಿದ್ದಾರೆ. ಸಂಬಂಧಿಸಿದ ಜಿಲ್ಲಾ ಮಟ್ಟದ ಎಲ್ಲಾ ಇಲಾಖಾ ಮುಖ್ಯಸ್ಥರು ತಪ್ಪದೆ ಖುದ್ದಾಗಿ ಸಭೆಗೆ ಹಾಜರಾಗಬೇಕೆಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾ ದಿಶಾ ಸಮಿತಿ ಸದಸ್ಯ ಕಾರ್ಯದರ್ಶಿ ಜಿ.ಪ್ರಭು ತಿಳಿಸಿದ್ದಾರೆ.

ರೈತರಿಗೆ ತೂಕದಲ್ಲಿ ಮೋಸ ಮಾಡಿದರೆ ಕ್ರಮ

ರಾಗಿ ಖರೀದಿ ಕೇಂದ್ರಕ್ಕೆ ಶಾಸಕ ಕೆ. ಷಡಕ್ಷರಿ ಭೇಟಿ | ಜೂನ್‌ವರೆಗೂ ಖರೀದಿ ಭರವಸೆ

• ಕನ್ನಡಪ್ರಭ ವಾರ್ತೆ ತಿಪಟೂರು

ರೈತರು ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಗಬೇಕೆಂಬ ದೃಷ್ಟಿಯಿಂದ ಸರ್ಕಾರ ರಾಗಿ ನಫೆಡ್ ಕೇಂದ್ರ ತೆರೆದು ಕ್ವಿಂಟಾಲ್ ರಾಗಿಗೆ 4290ರೂ ನಂತೆ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ರಾಗಿ ಕೊಂಡುಕೊಳ್ಳಲಾಗುತ್ತಿದ್ದು ನಫೆಡ್‌ನ ಅಧಿಕಾರಿಗಳು ರಾಗಿ ತೂಕದಲ್ಲಿ ರೈತರಿಗೆ ಮೋಸ ಮಾಡುತ್ತಿದ್ದಾರೆಂಬ ದೂರು ಕೇಳಿಬರುತ್ತಿದ್ದು ಸರಿಪಡಿಸಿಕೊಳ್ಳದಿದ್ದರೆ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಕೆ. ಷಡಕ್ಷರಿ ಎಚ್ಚರಿಕೆ ನೀಡಿದರು.

ರಾಗಿ ಖರೀದಿ ಕೇಂದ್ರಕ್ಕೆ ಭೇಟಿ ನೀಡಿ ರೈತರೊಂದಿಗೆ ಮಾತನಾಡಿದ ಶಾಸಕ ಕೆ. ಷಡಕ್ಷರಿ.

ನಗರದ ಎಪಿಎಂಸಿ ಆವರಣದಲ್ಲಿರುವ ರಾಗಿ ಖರೀದಿ ಕೇಂದ್ರಕ್ಕೆ ಮಂಗಳವಾರ ಭೇಟಿ ನೀಡಿ ಮಾತನಾಡಿದ ಅವರು, ನನಗೆ ರೈತರು ದೂರವಾಣಿ ಮಾಡಿ ಖರೀದಿ ಕೇಂದ್ರದಲ್ಲಿ ರಾಗಿ ಕೊಂಡುಕೊಳ್ಳುವ ವಿಚಾರವಾಗಿ ಮೋಸ ಮಾಡುತ್ತಿದ್ದಾರೆ. ಪ್ರತಿ ಕ್ವಿಂಟಾಲ್‌ಗೆ 3 ಕೆ.ಜಿ ರಾಗಿ ವಜಾ ಮಾಡುತ್ತಿದ್ದಾರೆಂದು ದೂರು ನೀಡಿದ್ದಾರೆ. ರಾಗಿಯಲ್ಲಿ ಸಣ್ಣ ಧೂಳು, ಕಲ್ಲು ಇರುವುದು ಸಹಜ ಹಾಗಂತ ನೀವು 3 ಕೆ.ಜಿ ರಾಗಿ ವಜಾ ಮಾಡಿದರೆ ರೈತರಿಗೆ ನಷ್ಟವಾಗುವುದಿಲ್ಲವೆ. ರೈತರು ಕಷ್ಟಪಟ್ಟು ರಾಗಿ ಬೆಳೆದು ಜೀವನ ನಿರ್ವಹಣೆಗಾಗಿ ನಫೆಡ್‌ಗೆ ತಂದು ಮಾರಾಟ ಮಾಡುತ್ತಿದ್ದಾರೆ. ಸರ್ಕಾರವೂ ಸಹ ಉತ್ತಮ ಬೆಲೆಯಲ್ಲಿ ಕೊಂಡುಕೊಳ್ಳುತ್ತಿದ್ದು ಮಧ್ಯವರ್ತಿಗಳಿಂತೆ ನೀವು ಪ್ರತಿ ಕ್ವಿಂಟಾಲ್‌ಗೆ ಮೂರು ಕೆಜಿ ರಾಗಿ ವಜಾ ಮಾಡಿದರೆ ರೈತರು ಏನು ಮಾಡಬೇಕು. ಅರ್ಧ ಕೆ.ಜಿ ರಾಗಿಯನ್ನು ಮಾತ್ರ ವಜಾ ಮಾಡಬೇಕು ಈ ದೂರು ಮತ್ತೊಮ್ಮೆ ಕೇಳಿ ಬಂದರೆ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ರಾಗಿ ಖರೀದಿ ಕೇಂದ್ರದ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ನಂತರ ಅಲ್ಲಿದ್ದ ರೈತರನ್ನು ಇಲ್